# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 395 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 29.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಾಮರಾಜನಗರ ಜಿಲ್ಲೆಯ ಚಿಕ್ಕಹೊಳೆ, ಸುವರ್ಣಾವತಿ, ಗುಂಡಾಲ್ ಜಲಾಶಯಗಳನ್ನು ಕೆರೆ ತುಂಬಿಸುವ ಯೋಜನೆಗೆ ಸೇರಿಸಲಾಗಿದೆಯೇ; ಕೆರೆ ತುಂಬಿಸುವ ಯೋಜನೆಯಡಿ ಕಬಿನಿ ಜಲಾಶಯದಿಂದ ನೀರನ್ನು ಯಾವಾಗ ತುಂಬಿಸಲಾಗುವುದು; | ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು, ಮುಳ್ಳೂರು ಗ್ರಾಮದ ಬಳಿ ಕಾವೇರಿ ನದಿಯ ನೀರನ್ನು ಎತ್ತಿ ಚಿಕ್ಕಹೊಳೆ ಜಲಾಶಯವನ್ನು ಹಾಗೂ ಇತರೆ 24 ಕೆರೆ ಕಟ್ಟೆಗಳನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ತುಂಬಿಸುವ ಸಲುವಾಗಿ ಚಾಮರಾಜನಗರ ತಾಲ್ಲೂಕಿನ ಚೆನ್ನಪ್ಪನಪುರ ಕೆರೆ, ವಡಗಲಪುರ ಕೆರೆ, ಬಂದಿಗೌಡನಹಳ್ಳಿ ಕರೆ ಹಾಗೂ ಚಿಕ್ಕಹೊಳೆ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆಯನ್ನು ಕೈಗೊಳ್ಳಲು ರೂ.120.00 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಕಾವೇರಿ ನೀರಾವರಿ ನಿಗಮದ 85ನೇ ಮಂಡಳಿ ಸಭೆಯಲ್ಲಿ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಅಂದಾಜು ಪರಿಶೀಲನಾ ಸಮಿತಿಯ ತೀರುವಳಿ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯಲು ಕ್ರಮವಹಿಸಲಾಗುತ್ತಿದೆ.<br><br>ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯವನ್ನು ಹಾಗೂ ರಾಮನಗುಡ್ಡ ಮತ್ತು ಹುಬ್ಬೆಹುಣಸೆ ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ರೂ.129.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಗುಂಡಾಲ್ ಜಲಾಶಯಕ್ಕೆ ನೀರನ್ನು ಹರಿಸಲಾಗುತ್ತಿದೆ.<br><br>ಸುವರ್ಣಾವತಿ ಜಲಾಶಯವನ್ನು ತುಂಬಿಸಲು ಯಾವುದೇ ಯೋಜನೆಯನ್ನು ರೂಪಿಸಿರುವುದಿಲ್ಲ. |
| ಆ) | ಚಿಕ್ಕಹೊಳೆ ಜಲಾಶಯದ ಮುಖ್ಯ ಗೇಟ್ ಶಿಥಿಲಗೊಂಡಿದ್ದು, ಗೇಟ್ ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಈ ಹಿಂದೆ ಕಳಪೆ ಗೇಟ್ ಅಳವಡಿಸಿದ ಅಧಿಕಾರಿ ಮತ್ತು ಗುತ್ತಿಗೆದಾರರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗಿದೆಯೇ? | ಚಿಕ್ಕಹೊಳೆ ಜಲಾಶಯದ ಮುಖ್ಯ ಗೇಟ್‌ಗಳನ್ನು ಬದಲಾಯಿಸಲಾಗಿದ್ದು, ಸದರಿ ಗೇಟ್‌ಗಳು ಸುಸ್ಥಿತಿಯಲ್ಲಿರುತ್ತವೆ. |

ಸಂ : ಜಸಂಇ 13 ಎನ್‌ಎಲ್‌ಎ 2026

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ